ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: 

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 

# ಬೀದಿಬದಿಯ 3 ಲಕ್ಷ ವ್ಯಾಪಾರಿಗಳಿಗೆ ಇಂದು ಸಾಲ ವಿತರಣೆ

**ನವದೆಹಲಿ:** ಕೊರೊನಾ ಲಾಕ್‌ಡೌನ್‌ನಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ 3 ಲಕ್ಷ ಬೀದಿ ಬದಿಯ ವ್ಯಾಪಾರಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಸ್ವಾನಿಧಿ ಯೋಜನೆ ಮೂಲಕ ಸಾಲ ವಿತರಣೆ ಮಾಡಲಿದ್ದಾರೆ.



ಸ್ವಾನಿಧಿ ಯೋಜನೆಯನ್ನು ಕೇಂದ್ರ ಸರ್ಕಾರ ಜೂ.1ರಂದು ಜಾರಿಗೆ ತಂದಿತ್ತು. ಇದರನ್ವಯ, ಬೀದಿಬದಿಯ ವ್ಯಾಪಾರಿಗಳು 1 ವರ್ಷದವರೆಗೆ 10 ಸಾವಿರ ರೂ.ಗಳವರೆಗೆ ಸಾಲ ಪಡೆಯಬಹುದಾಗಿದೆ. ಆತ್ಮನಿರ್ಭರ ಭಾರತದ ಪ್ರೋತ್ಸಾಹ ಧನದ ಅನ್ವಯ ಪ್ರಧಾನಿ ಮೋದಿ ಮಂಗಳವಾರ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಸಾಲ ವಿತರಿಸಲಿದ್ದಾರೆ. ಸ್ವಾನಿಧಿ ಯೋಜನೆಗೆ 24 ಲಕ್ಷಕ್ಕೂ ಅಧಿಕ ಅರ್ಜಿಗಳು ಸಲ್ಲಿಕೆಯಾಗಿದ್ದವು. 12 ಲಕ್ಷ ಮಂದಿಯನ್ನು ಮಾತ್ರವೇ ಫಲಾನುಭವಿಗಳೆಂದು ಗುರುತಿಸಲಾಗಿದೆ. ಇದುವರೆಗೆ 5.35 ಲಕ್ಷ ಮಂದಿಗೆ ಸಾಲ ವಿತರಿಸಲಾಗಿದೆ.